ಬಳಿಕ ಸೋದರ ಉಮೇಶನ ಕೈ ಹಿಡಿದು ಗ್ರಾಮಮಧ್ಯದ ಸಿಂಹವಾಹಿನಿ ದೇವಾಲಯದತ್ತ ಶ್ರೀಮಾತೆ ಆಯಾಸದಿಂದ ದಾಪುಗಾಲು ಹಾಕುತ್ತ ಹೊರಟರು. ರೋಗಬಾಧೆಯು ಶರೀರವನ್ನು ನಿತ್ರಾಣಗೊಳಿಸಿದ್ದಷ್ಟೇ ಅಲ್ಲ, ಕಣ್ಣುಗಳ ದೃಷ್ಟಿಯನ್ನೂ ಮಸುಕುಗೊಳಿಸಿತ್ತು. ಮತ್ತೊಬ್ಬರ ಆಸರೆಯಲ್ಲಿ ಹೀಗೆ ಕೈಹಿಡಿದು ನಡೆಯುವಂತಾಗಿರುವ ರೋಗಬಾಧೆಯು ಗ್ರಾಮದೇವಿ ಸಿಂಹವಾಹಿನಿಯಿಂದ ಗುಣವಾಗುತ್ತದೆ ಎನ್ನುವ ನಂಬುಗೆ ಅವರಿಗುಂಟಾಯಿತು. ಹೊರಗಣ್ಣುಗಳಿಗೆ ಈ ಮೊದಲು ನಿಲುಕುತ್ತಿದ್ದ ದೇವಿಯ ರೂಪವನ್ನು ಈಗ ತಮ್ಮ ಒಳಕಂಗಳಲ್ಲಿ ಕಾಣುತ್ತ ಅವರು ದೇವಾಲಯವನ್ನು ತಲುಪಿದರು.

"ಇದೇ ಸಿಂಹವಾಹಿನಿ ಮಂದಿರ, ಇಲ್ಲೇ ಕೂರಕ್ಕ!" ಕೈಹಿಡಿದು ಕರೆತಂದ ಉಮೇಶ ಶ್ರೀಮಾತೆಯವರನ್ನು ದೇವಿಯ ಎದುರು ಬಿಟ್ಟುಹೋದ.

"ಆಹಾ! ದೇವಮಂದಿರವಿದು, ದೇವಿ ನೆಲೆಗೊಂಡಿಹ ಪುಣ್ಯ ಮಂದಿರವಿದು. ಹಿತವೆನಿಸುತ್ತಿದೆ ಇಲ್ಲಿ ನೋವಿನೊಳಗೂ..." ಶ್ರೀಮಾತೆ ತಡವರಿಸುತ್ತ ಕೆಳಗೆ ಕುಳಿತರು. ದೇವಿ ಸಿಂಹವಾಹಿನಿಯನ್ನು ತಮ್ಮ ಅಂತರ್‌ದೃಷ್ಟಿಯಲ್ಲಿ ನೋಡುತ್ತ ಹೀಗೆ ಹೇಳಿದರು: "ಓ ಸಿಂಹವಾಹಿನಿ ದೇವಿ, ನೋಡೆನ್ನವಸ್ಥೆ ಹೀಗಾಗಿಹುದು! ಸರ್ವವನೂ ಅರಿತವಳಲ್ಲವೇ ನೀ... ಹೇಳಲೇನಿದೆ, ನಿನ್ನೆದುರಿನಲ್ಲಿ? ಈ ಕಾಯ ಅನುಭವಿಸುತ್ತಿಹ ನೋವುನಂಜುಗಳು ಈ ಕಾಯಕ್ಕೇ ಇರಲಿ ಬಿಡು. ಕಾಯಬಾಧೆಯ ಆಟ ಕಾಯವಿಡಿದ ಸರ್ವರಿಗೂ ಬಿಡದೆ ಕಾಡುವಂಥಹುದಲ್ಲವೇ? ಕಾಯವಿಡಿದವರು ಯಾರಾದೊಡೇನು, ಅನುಭವಿಸಬೇಕಲ್ಲವೇ ರೋಗರುಜಿನಗಳನೆಲ್ಲ? ಅರ್ಪಿತವು ಈ ಮನ ಪತಿದೇವರಡಿಗೆ. ತ್ರಿಕರಣವಿಡಿದು ಸರ್ವವೂ ಸಮರ್ಪಿತವು. ಇದೆಂಥ ಚೋದ್ಯ ನೋಡು, ದೇವಿ. ಪೌರ್ಣಮಿಯ ಈ ರಾತ್ರಿ ನನಗೆ ಗಾಢಾಂಧಕಾರದ ಅಮಾವಾಸ್ಯೆಯಾಗಿಹುದಲ್ಲ! ಓ ಶಕ್ತಿದೇವಿ ಸಿಂಹವಾಹಿನಿ! ಇದೋ ನಿನಗೆ ನಮನ! ಉಪವಾಸವಿರುವೆ ನಿನ್ನ ಈ ಸನ್ನಿಧಿಯಲ್ಲೇ! ಆ ಕೆರೆದಂಡೆಗಿಂತ ಹಿತವೆನಿಸುತ್ತಿದೆ ನಿನ್ನ ಈ ಸನ್ನಿಧಿ!"

ಆಗ ಸಿಂಹವಾಹಿನಿ ಹೀಗೆ ಭಾವಿಸಿದಳು: "ಓಹೋ! ಏನಿದೆಂಥ ಅಚ್ಚರಿ ನನ್ನೆದುರಿನಲ್ಲಿ? ಮಹಾಮಾಯೆಯೇ ಬಂದಿಹಳು ನನ್ನೆದುರಿಗೆ! ಕಾಯವಿಡಿದ ಮಹಾಮಾಯೆಗೂ ಕಾಯಬೇನೆಯಾಟ! ನರಳುತಿಹುದು ಮಹಾಮಾಯೆಯ ಕಾಯವೂ ಸಾಮಾನ್ಯಜೀವರ ಕಾಯದಂತೆ! ಏನಿದಚ್ಚರಿ! ಉಪವಾಸವಿಹಳು ನನ್ನೆದುರಿನಲ್ಲಿ! ಮಹಾಮಾಯೆಗೂ ಮಾಯೆಯಾವರಣವೇ? ಕಾಯವಿಡಿದು ಜನಿಸಿಹಳು ಈ ಗ್ರಾಮದಲ್ಲಿಯೇ; ಬೆಳೆದಿಹಳು ಸಾಮಾನ್ಯಳೆಂಬಂತೆ. ಈಕೆಯ ಕೈಹಿಡಿದಿಹನೋ ಮಹಾವತಾರಿ ಯೋಗಿಪುಂಗವ! ದೇವಿಮೂರ್ತಿಯಂತೆ ಪೂಜಿಸಿಹನು ಈ ಪರಮಸತಿಯನು, ಶುದ್ಧಭಾವದಲಿ. ಇಂಥ ದೇವಿರೂಪಳಿಗೂ ಈ ಅವಸ್ಥೆಯೇ? ಮರುಳಳಂತೆ ಕುಳಿತಿಲ್ಲ, 'ಕಾಯಕಷ್ಟ ಕಾಯಕಿರಲೇಳು' ಎನ್ನುತ್ತಿಹಳು. ಸರಳ ಮದ್ದುಂಟು ಈ ಕಾಯ ಬೇನೆಗೆ. ತೀವ್ರಗೊಂಡಿಹುದು ಆಮಶಂಕೆಯ ಬಾಧೆ. ರಾತ್ರಿಯೆಲ್ಲ ತಡಕಾಡಿ ಹೋಗಿಬರುತ್ತಿಹಳು ಆಚೆಗೆ. ದೇವಿಯೇ ತಾನಾದರೂ ಬಂದಿಹಳು ನನ್ನೆಡೆಗೆ. ನಾನಿಲ್ಲಿಹೆನೆಂಬ ಭಾವವೇ ಆಕೆಯನ್ನು ಕರೆತಂದಿಹುದಿಲ್ಲಿಗೆ. ಸಾಕಿನ್ನು ಕಾಯದ ನೋವು ಮಹಾಮಾಯಿಗೆ. ಅಳಿಯಲಿ ಬೇಗ ಕಾಯಬಾಧೆ, ಮದ್ದಸೇವಿಸಿ. **ದೇವಿಯೇ ದೇವಿಯ ಎದುರು ಕೂರುವುದೆ ಹೀಗೆ!"**

ಸುಪ್ತಗುಪ್ತತೆ ಕಳಚಿದ ಸಿಂಹವಾಹಿನಿದೇವಿ ತನ್ನ ದೇವಬಿಂಬದಲಿ ಚೈತನ್ಯಶಕ್ತಿಯನ್ನು ತುಂಬಿಕೊಂಡಳು. ಬಾಲೆಯ ರೂಪ ತಾಳಿದಳು. ಶ್ರೀಮಾತೆಯವರಿಗೆ ಜನ್ಮವಿತ್ತ ಜನನಿ ಶ್ಯಾಮಾಸುಂದರಿಯತ್ತ ನಡೆದು ನುಡಿದಳು: "ಎದ್ದು ಹೊರಡು ಈ ಕ್ಷಣವೇ, ಮಗಳು ಶಾರದೆಗೆ ಮದ್ದ ನೀಡು, ತಡ ಮಾಡದಿರು. ಈ ಸೊಪ್ಪಿನೌಷಧದಲಿ ಗುಣವಾಗುವುದು ಬೇನೆ!" ಶ್ಯಾಮಾಸುಂದರಿಯ ಕನಸಲ್ಲಿ ನುಡಿದು ನಂತರ ನಡೆದು ಬಂದಳು ಇತ್ತಲೂ, ತನ್ನ ಮಂದಿರದಲಿ ಉಪವಾಸವಿರುವ ಶ್ರೀಮಾತೆಯವರ ಬಳಿಗೂ. ಇಲ್ಲಿಯೂ ನುಡಿದಳು: "ಸೋರೆಹೂವಿಗೆ ಉಪ್ಪು ಬೆರೆಸಿ ಅರೆದು, ಹನಿಹನಿಗಳ ಹನಿಸು ಕಂಗಳಿಗೆ. ಬೇನೆ ಗುಣವಾಗಿ ಅಳಿಯುವುದು ಕಾಯಕ್ಕೆ ಕಾಡುತ್ತಿಹ ರೋಗ!"

ದೇವಿ ನುಡಿದಳು! ಸಿಂಹವಾಹಿನಿದೇವಿ ನುಡಿದಳು! ಭ್ರಮೆಯಲ್ಲ, ದಿಟವಾಗಿ ನುಡಿದಳು ಸಿಂಹವಾಹಿನಿ! ಕೈಬಿಡುವಳೇ ದೇವಿ ಉಪವಾಸವಿಡಿದವಳನು? ತಾಯಿಗೂ ಕಂಡಿಹಳು ಸಿಂಹವಾಹಿನಿದೇವಿ! ಸಾಕ್ಷ್ಯದೋರಿಹಳು ತಾನಿಲ್ಲಿಹೆನು ಎಂಬುದನು!

ಬೇನೆಯ ನೋವು ಅಳಿದೇ ಹೋಯಿತೆನ್ನುವ ಅಚ್ಚರಿಯ ಝಳಕು ಮೈತುಂಬ ಹರಿದು ಶ್ರೀಮಾತೆ ಆನಂದದಲ್ಲಿ ಮುಳುಗಿದರು. ತಾಯಿ ಶ್ಯಾಮಾಸುಂದರಿ ತಂದ ಔಷಧಿಯ ಹನಿಹನಿ ಹನಿದಿತ್ತು ಶ್ರೀಮಾತೆಯವರ ಕಂಗಳಿಗೆ, ಸಿಂಹವಾಹಿನಿಯ ಸೂಚನೆಯಂತೆ.

"ತಾಳಲಾರೆನುರಿ ಅಯ್ಯಯ್ಯೋ! ಭಗಭಗ ಬೆಂಕಿಯೊಳಗೆ ಬೆಂದುಹೋಗುತಿವೆ ಕಂಗಳು ಜ್ವಾಲೆಯೊಳಗೆ ಸಿಲುಕಿ!" ಕಂಗಳಿಗೆ ಇಳಿದ ಔಷಧಿ ಜ್ವಾಲಾಮುಖಿಯಾಗಿ ವ್ಯಾಪಿಸುತ್ತಿದೆ ಕಾಯದಿಂಚಿಂಚನೂ... ಬೇನೆಯ ಮೂಲವೆಲ್ಲ ಜ್ವಲಿಸಿ ಹರಿಯುತ್ತಿದೆ ಹೊರಗೆ..." ಪುಟಕಿಟ್ಟ ಬಂಗಾರವಾಯಿತೀಗ ಶ್ರೀಮಾತೆಯವರ ಕಾಯ! "ತಿಳಿಗೊಳ್ಳುತಿವೆ ಎರಡೂ ಕಂಗಳು! ತೆರೆದ ರೆಪ್ಪೆಯೆದುರು ಸರ್ವವೂ ದೃಷ್ಟಿಗೋಚರವಾಗುತ್ತಿದೆ! ಓಹೋಹೋ! ಮರಳಿತು ದೃಷ್ಟಿ ಅಂಧತೆಯಳಿದು! ಏನಿದೀ ಲೀಲೆ! ಸಿಂಹವಾಹಿನಿಯ ಲೀಲೆ! ಅಳಿಯಿತೊಂದೇ ಕ್ಷಣಕೆ ಬೇನೆಯೆಲ್ಲ! ಕಾಯವಿಕಾರವೂ ಅಳಿದಿಹುದಲ್ಲ! ಹಗುರವೆನ್ನಿಸುತ್ತಿದೆ ಕಾಯದೊಳಗೆ ಹೂವರಳಿರುವಂತೆ!. ಮೈಮನದೊಳಗೆ ಉಲ್ಲಾಸ ತುಂಬಿ ಸೂಸುತಿದೆ! "

"ಮೊರೆ ಹೊಕ್ಕವರ ಪೊರೆಯದಿಹಳೇ ದೇವಿ? ಜಗನ್ಮಾತೆ ತಾನೆ ಕೊಟ್ಟಳು ಔಷಧವ! ಸಿಂಹವಾಹಿನಿ ದೇವಿಯ ಲೀಲೆಯಿದು!" ಎಂದು ಶ್ರೀಮಾತೆ ನುಡಿದರು. 'ಹೇಗೆ ಗುಣವಾಯಿತು?' ಎಂದು ಕೇಳಿದವರೆಲ್ಲರಿಗೂ ಬಣ್ಣಿಸಿದರು ಸಿಂಹವಾಹಿನಿಯ ಕೃಪೆಯನ್ನು.

ಹಬ್ಬಿತು ಸುತ್ತೆಲ್ಲ ಸಿಂಹವಾಹಿನಿಯ ಕೀರ್ತಿ. ಶ್ರೀಮಾತೆಯವರ ಚರಿತೆಯಲೂ ಸೇರಿಹುದು ಈ ಲೀಲೆ. ಜಯರಾಂಬಾಟಿಯ ಸಿಂಹವಾಹಿನಿ ಮಂದಿರಕೆ ಶ್ರೀಮಾತೆಯವರ ಭಕ್ತರೂ ಭೇಟಿಕೊಡುವರು ಇಂದು. ಈ ಗ್ರಾಮದಲ್ಲಿ ಶ್ರೀರಾಮಕೃಷ್ಣರ ಶಕ್ತಿರೂಪಿಣಿ ಶಾರದಾದೇವಿಯವರ ಮಂದಿರ ಜಾಗ್ರತಸ್ಥಾನವಾಗಿಹುದು. ಆ ದೇವಿ, ಈ ದೇವಿ – ಇಬ್ಬರ ಸೂಕ್ಷ್ಮಬಿಂಬಗಳೂ ಕಂಗೊಳಿಸುವುವು, ಪ್ರೀತಿಯುಳ್ಳ ಭಕ್ತರ ಭಾವ ಮಿಡಿಸಿ, ಅವರ ಕಂಗಳಾಚಿನ ದೃಷ್ಟಿಗೆ. ⌘